

ಶ್ರೀ ಬಬ್ಬರ್ಯ – ಬಂಟ ದೈವಸ್ಥಾನದಲ್ಲಿನ ನೇಮೋತ್ಸವದಲ್ಲಿ ದೈವ ನರ್ತನ.
ಫೋಟೊ: ಫಕ್ರುದ್ದೀನ್ ಎಚ್.



## ಪಾಡ್ದನ ಕಲೆ ಒಲಿಯಬೇಕಾದರೆ...

ಪಾಡ್ದನಗಳು ಬಾಲ್ಯದಲ್ಲಿಯೇ ಒಲಿದು ಬರಬೇಕು. ಆದರದ್ದೇ ಆದ ರಾಗವೊಂದನ್ನು ರೂಢಿಸಿಕೊಳ್ಳಬೇಕಾದರೆ ಬಹಳ ನಿಷ್ಠೆಯಿಂದ ಪಾಡ್ದನಗಳನ್ನು ಕಲಿಯಬೇಕು. ಜೊತೆಗೆ ಅವು ಆಯಾ ಕಾಲದ ಸಂಗತಿಗಳನ್ನು ಸೇರಿಸಿಕೊಳ್ಳುತ್ತ ಬೆಳೆಯುವುದೂ ಉಂಟು. ಹಾಗೆ ಬೆಳೆಸುವ ಪ್ರತಿಭೆಯೂ ಪಾಡ್ದನ ಹೇಳುವವರಿಗೆ ಒಲಿಯಬೇಕು. ನಾನು ಉಳ್ಳಾಯ, ಕೊಡಮಣಿತ್ತಾಯ, ಕಾಂತೇರಿ ಜುಮಾದಿ, ಮಧೂರು ಧೂಮಾವತಿ, ದೈವ ಅಣ್ಣಪ್ಪ... ಹೀಗೆ ರಾಜನ್ ದೈವಗಳಿಗೆ ನೇಮ ಕಟ್ಟುತ್ತಿದ್ದೆ. ಅವುಗಳಿಗೆ ಸಂಬಂಧಿಸಿದ ನುಡಿಹೇಳುವಿಕೆಯನ್ನು ಕಲಿತಿದ್ದೇನೆ. ಆದರೆ ಬಾಲ್ಯದಲ್ಲಿ ನಾನು ಮುಂಬೈಗೆ ಕೆಲಸಕ್ಕಾಗಿ ಹೋಗಿದ್ದರಿಂದ ಪಾಡ್ದನ ಕಲೆ ಒಲಿಯಲಿಲ್ಲ. ನನ್ನೊಡನೆ ನನ್ನ ಅಕ್ಕ ಶಿಲ್ಲು ಮೈಲೊಟ್ಟು ಎಲ್ಲ ನೇಮಗಳಿಗೆ ಬರುತ್ತಿದ್ದಳು. ಅವಳು ಪಾಡ್ದನಗಳನ್ನು ಹೇಳುವುದರಲ್ಲಿ ಎತ್ತಿದ ಕೈ. ತೆಂಬರೆ ಹಿಡಿದು ಪಾಡ್ದನ ಹೇಳುತ್ತಿದ್ದರೆ, ದೈವಗಳ ಲೋಕವನ್ನೇ ಸೃಷ್ಟಿಸಬಲ್ಲವಳಾಗಿದ್ದಳು. ನಾವೆಲ್ಲ ಪಾಡ್ದನಗಳನ್ನು ಪುಸ್ತಕ ನೋಡಿ ಕಲಿತದ್ದಿಲ್ಲ. ಹಿರಿಯರು ಹೇಳಿಕೊಟ್ಟದ್ದನ್ನು ಕಲಿಯುತ್ತಿದ್ದೆವು. ನನ್ನ ಮಕ್ಕಳಾದ ಕುಮಾರ್ ಮತ್ತು ಲಕ್ಷ್ಮಣ್ ಕೂಡ ಸುಂದರವಾಗಿ ಪಾಡ್ದನ ಹೇಳಬಲ್ಲರು. ನೇಮ ನಡೆಸುವುದನ್ನೂ ಕಲಿತಿದ್ದಾರೆ. ಆದರೆ ಹೊಸ ತಲೆಮಾರು ಯಾಕೋ ಅಷ್ಟೇನೂ ಆಸಕ್ತಿ ತೋರಿಸುತ್ತಿಲ್ಲ.

**–ಕುಟ್ಟಿ ಪಂಬದ**
ದೈವ ನರ್ತಕ, ಮಾಯ್ಲೊಟ್ಟು, ಮೂಲ್ಕಿ



ಎಂಬ ವರವನ್ನು ಕೊಡುತ್ತಾನೆ. ಹಾಗೆ ಭೂಮಿಗೆ ಬರುವ ವಾರಾಹಿ ಅಥವಾ 'ಪಂಜುರ್ಲಿ' ನೈತಿಕತೆ ಮತ್ತು ಮನುಷ್ಯ ಧರ್ಮವನ್ನು ಕಾಪಾಡುವ ಕಾಯಕವನ್ನು ವಹಿಸಿಕೊಳ್ಳುತ್ತಾನೆ.

### ಸಾವಿರಾರು ದೈವ

ಸಾವಿರಕ್ಕೂ ಹೆಚ್ಚು ದೈವಗಳು ತುಳುನಾಡಿನಲ್ಲಿ ಪೂಜೆ ಪಡೆಯುತ್ತಿವೆ. ಲಕ್ಷಕ್ಕೂ ಮಿಕ್ಕಿದ ಕಥೆಗಳು ಜನಮಾನಸದಲ್ಲಿವೆ. ಅವುಗಳ ಪೈಕಿ ಅನೇಕ ದೈವಗಳ ಆರಾಧನೆಯು ನಿಂತು ಹೋಗಿರಬಹುದು. ಅವಿಭಕ್ತ ಕುಟುಂಬ ಪದ್ಧತಿಯು ಉಳಿದುಕೊಂಡ ಮನೆಗಳಲ್ಲಿ ಅಥವಾ ತಮ್ಮ ಹಿರೀಕರ ಮನೆಗಳಿಗೆ ನಡೆದುಕೊಳ್ಳುವ ಸಂಪ್ರದಾಯವು ಎಲ್ಲೆಲ್ಲಿ ಉಳಿದುಕೊಂಡಿದೆಯೊ ಅಲ್ಲೆಲ್ಲ ದೈವಾರಾಧನೆಯು ಈಗಲೂ ಜೀವಂತವಾಗಿವೆ. ಸಾಮಾನ್ಯವಾಗಿ ಪ್ರಾಕೃತಿಕವಾಗಿ ಉದ್ಭವವಾದ ದೈವಗಳನ್ನು ರಾಜನ್ ದೈವ ಎಂದು ಗುರುತಿಸಿದರೆ ಅವುಗಳಿಗೆ ನೇಮ ನಡೆಸುವ, ವ್ಯಕ್ತಿಗಳು ಶಕ್ತಿಯಾಗಿ ಹೊಮ್ಮಿದ ದೈವಗಳಿಗೆ ಕೋಲ ನಡೆಸುವ ಪದ್ಧತಿಯು ಚಾಲ್ತಿಯಲ್ಲಿದೆ. ಹಿಂದೆಲ್ಲ ಕೋಲವಾಗಲೀ ನೇಮವಾಗಲೀ ಬಹಳ ಅಪರೂಪದ ಸೇವೆಯಾಗಿತ್ತು. ಇತ್ತೀಚೆಗೆ ಹಣಕಾಸಿನ ಹರಿವು ಹೆಚ್ಚಿದಂತೆ ಸೇವಾ ರೂಪದ ಈ ಆರಾಧನೆಯೂ ಹೆಚ್ಚಾಗಿದೆ.

ನಲಿಕೆಯವರು, ಪರವರು, ಪಂಬದರು, ಪಾಣಾರರು, ಕೋಪಾಳರು, ಫಣಿಕ್ಕರ್ – ಹೀಗೆ ದೈವದ ಆರಾಧನೆ ಮಾಡುವ ಹಕ್ಕು ನಿರ್ದಿಷ್ಟ ಸಮುದಾಯಗಳಿಗೆ ಸೇರಿದ್ದಾಗಿದೆ. ಆರಾಧನೆಯಲ್ಲಿ ಭಾಗವಹಿಸುವ ಇವರ ದೈನಂದಿನ ದಿನಚರಿಯಲ್ಲಿಯೂ ಅನೇಕ ನೇಮನಿಷ್ಠೆಗಳಿರುತ್ತವೆ. ದೈವಾರಾಧನೆಯನ್ನು ಆಯೋಜಿಸುವ ಯಜಮಾನ 'ಗಡಿಕಾರ' ಅಥವಾ ನೇಮಬದ್ಧನಾದವನಾಗಿರುತ್ತಾನೆ. ಅದೇ ರೀತಿ ದೈವನರ್ತಕರೂ ಶುದ್ಧಾಚಾರ, ಮಡಿಮೈಲಿಗೆಗಳನ್ನು ನಂಬಿ ಜೀವನ ನಡೆಸುವವರಾಗಿರುತ್ತಾರೆ.

ದೈವಗಳು ಆರಾಧನೆಯ ಸಂದರ್ಭದಲ್ಲಿ ತುಳು ಭಾಷೆಯನ್ನೇ ಹೆಚ್ಚಾಗಿ ಮಾತನಾಡಿದರೂ, ಕುಂದಾಪುರದ ಕಡೆ ಕನ್ನಡದಲ್ಲಿಯೂ, ಕಾಸರಗೋಡು ಕಡೆಯಲ್ಲಿ ಮಲೆಯಾಳಂನಲ್ಲಿಯೂ ಮಾತನಾಡುವುದುಂಟು. ಕೇರಳದಲ್ಲಿ ಈ ದೈವಗಳಿಗೆ 'ತೆಯ್ಯಂ' ಎನ್ನುತ್ತಾರೆ. ಸುಮಾರು ಸಾವಿರಕ್ಕೂ ಹೆಚ್ಚು ದೈವಗಳ ಹೆಸರುಗಳನ್ನು ಸಂಶೋಧಕಿ ಲಕ್ಷ್ಮೀ ಜಿ. ಪ್ರಸಾದ್ ಅವರು ಸಂಗ್ರಹಿಸಿದ್ದಾಗಿ ಹೇಳಿದ್ದಾರೆ. ಅವಿಭಕ್ತ ಕುಟುಂಬಗಳು ಅಳಿಯುತ್ತಿದ್ದಂತೆಯೇ ಈ ಆರಾಧನಾ ಪದ್ಧತಿಯೂ ಮರೆಗೆ ಸರಿಯುತ್ತಿರುವುದು ಸುಳ್ಳಲ್ಲ.

ಮಳೆಗಾಲವು ಹಿಂದೆ ಸರಿಯುತ್ತ ದೀಪಾವಳಿಯ ಬೆಳಕು ಮೂಡುತ್ತಿದ್ದಂತೆಯೇ ಕರಾವಳಿಯಲ್ಲಿ ಆರಾಧನಾ ಪರ್ವದ ಹೆಬ್ಬಾಗಿಲು

ಮಂಗಳೂರಿನ ಬಿಜೈನಲ್ಲಿ ಶ್ರೀ ಅರಸು ಪುಲಂದಾಯ ಜುಮಾದಿ ಬಂಟ ಪರಿವಾರ ದೈವಗಳ ದೈವಸ್ಥಾನದಲ್ಲಿ ನೇಮೋತ್ಸವ, ಬಂಡಿ ಉತ್ಸವ. ಫೋಟೊ: ಫಕ್ರುದ್ದೀನ್ ಎಚ್.